

## ಕನ್ನಡಿಯ ಚೂರಲ್ಲಿ ಸಿಕ್ಕ ಚಂದ್ರ

ಎತ್ತ ಬಾಗಿಲೋ ಎತ್ತ ಮುಖವೋ
ಸುತ್ತ ಫಳಫಳ ಕನ್ನಡಿಗಳನೇ ನೆಟ್ಟಿರುವಾಗ
ಕಣ್ಣು ಜಾಡಿಸಿಕೊಂಡು ಹುಡುಕುತ್ತಾಳೆ
ತನ್ನನೇ ತಾನು

ಕನ್ನಡಿಯ ಚೂರಲ್ಲಿ ಸಿಕ್ಕು ನೆಲಕೆ ಬಿದ್ದ
ಚಂದ್ರನ ಉಟ್ಟದ್ದು
ಕಣ್ಣೋ ಕನ್ನಡಿಯೋ
ಬೆಳಕಿಗೂ ಇಲ್ಲಿ ಹೊನ್ನಬಣ್ಣ

ಏನಿತ್ತೊ ಅವಸರವು ಹೀಗೆ
ಬಂಧಿಯಾದವಳ ಬಿಡಿಸಲೊಂದು ಮಂತ್ರವು
ತಿಳಿದಿಲ್ಲ ನನಗೆ
ಕನಸುಗಳಿಗೂ ರೆಕ್ಕೆ ಇದ್ದಿದ್ದರೆ
ಹಾರಬಹುದಿತ್ತು ನಲ್ಲೆ ಥೇಟ್
ಯಕ್ಷಲೋಕದ ಕಿನ್ನರಿಯ ಹಾಗೆ

**ಪ್ರವೀಣಕುಮಾರ ದೈವಜ್ಞಾಚಾರ್ಯ**

## ಮಾಯಾಂಗನೆ

ನೋಟದಲ್ಲೆ ಮೆಲ್ಲಗೆ ತಟ್ಟಿ
ಕರೆದ ಭಾವವು ಕರಗಿದೆ
ವರ್ಣಿಸಲಾಗದ ಅದಮ್ಯ ರೂಪ
ನೋಡಿದ ನೆರಳನು ಕೆಣಕಿದೆ!

ಹಿಡಿಯಲಾಗದ ಬಣ್ಣದೊಳಗಿದೆ
ಚೆಲುವಿನಧರದ ನಾಚಿಕೆ
ಕೇಶರಾಶಿಯೂ ಬೇಟೆಯಾಡಿದೆ
ಕಣ್ಣು ಕುಕ್ಕುವ ದಾಹಕೆ!

ಬೆಡಗಿನ ಅರಮನೆಯಂಗಳದಲ್ಲಿ
ಕಿನ್ನರ ಲೋಕದ ರಾಜಕುಮಾರಿ
ಸುತ್ತಲೂ ಮಲಗಿದೆ ಕೆಟ್ಟ ದೃಷ್ಟಿ
ಕದ್ದವರೆದೆಯಲ್ಲಿ ನೀ ಅಲೆಮಾರಿ!

ಸೆಳೆವ ಮೌನ ಹೊಳೆವ ಅಂದಕೆ
ಜೋಪಾನವಾಗಿಸಿಟ್ಟರೇ ಬಂದಿಸಿ
ಗಲ್ಲ ಸವರುವ ಕೈಯ ಸ್ಪರ್ಶ
ಕನಸಾಗಿ ಉಳಿಯಿತೇ ಚಿಂತಿಸಿ

**ವೀಣಾ ರಾವ್**